ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **168/2021**

| | | |
|---|---|---|
| ಸಾಕ್ಷಿಯ ಹೆಸರುಃ | ವಿಠಲ | ಪ್ರಾಸಾಃ 1 |
| ತಂದೆ/ಗಂಡನ ಹೆಸರುಃ | ಬರ್ಮಯ್ಯ | ಚಾಸಾಃ 1 |
| ವಯಸ್ಸು ಃ | 65 ವರ್ಷ | ದಿಃ 07-03-2026 |
| ಉದ್ಯೋಗಃ | ನಿವೃತ್ತ ಪೊಲೀಸ ಅಧಿಕಾರಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಗುಲ್ಬರ್ಗಾ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>

ನಾನು ದಿನಾಂಕಃ 01-03-2017 ರಿಂದ 31-03-2021 ರವರೆಗೆ ಯಾದಗಿರಿ (ಗ್ರಾ) ಪೋಲಿಸ ಠಾಣೆಯಲ್ಲಿ ನಾನು ಎ.ಎಸ್.ಐ ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 24-09-2020 ರಂದು 2.00 ಪಿ.ಎಮ್. ಸುಮಾರಿಗೆ ನಾನು ಠಾಣೆಯಲ್ಲಿದ್ದಾಗ, ಮಲಾರ ಗ್ರಾಮದಲ್ಲಿ ಯಾರೋ ಒಬ್ಬ ವ್ಯಕ್ತಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದ ಮೇರೆಗೆ ಪಂಚರನ್ನು ಕರೆಸಿ ಸಿಬ್ಬಂದಿಗಳಿಗೆ ಮಾಹಿತಿ ತಿಳಿಸಿ, ಠಾಣೆಯಿಂದ ಗುನ್ನೆ ಸ್ಥಳಕ್ಕೆ ಹೊರಟು, 2.15 ಗಂಟೆಗೆ ಮಲಾರ ಗ್ರಾಮಕ್ಕೆ ಹೋಗಿ ಮರೆಯಾಗಿ ನಿಂತು ನೋಡಲಾಗಿ, ಆರೊಪಿತರು ಮದ್ಯ ಮಾರಾಟ ಮಾಡುವುದನ್ನು ಖಚಿತಪಡಿಸಿಕೊಂಡು ದಾಳಿ ಮಾಡಿದಾಗ ಸದರಿ ಸ್ಥಳದಲ್ಲಿ 90 ಎಮ್. ಎಲ್ ನ ಓರಿಜಿನಲ್ ಚಾಯ್ಸ, 330 ಎಮ್, ಎಲ್ ನ 14 ಕೆಎಫ್ ಸ್ಟ್ರಾಂಗ್ ಮತ್ತು 650 ಎಮ್. ಎಲ್ ಕೆಎಫ್ ಸ್ಟ್ರಾಂಗ್ ಬೀಯರ ಒಟ್ಟು ಅಂದಾಜು ಕಿಮ್ಮತ್ತು 5,621/-ರೂ. ಒಂದು ಸ್ಯಾಂಪಲ ಎಫ್. ಎಸ್. ಎಲ್ ವರದಿಗಾಗಿ ಪಂಚರ ಸಮಕ್ಷಮದಲ್ಲಿ ಜಪ್ತಿ ಮಾಡಿಕೊಂಡಿರುತ್ತೇವೆ. ಪಂಚನಾಮೆಯನ್ನು 3.00 ಗಂಟೆಯಿಂದ 4.00 ಗಂಟೆಯವರೆಗೆ ಜರುಗಿಸಿರುತ್ತೇವೆ. ನಂತರ ಠಾಣೆಗೆ ಬಂದು ಮು. ಮಾ. ಮತ್ತು ಜಪ್ತಿ ಪಂಚನಾಮೆಯನ್ನು ಚಾಸಾಃ 8 ರವರಿಗೆ ನೀಡಿರುತ್ತೇನೆ. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ಜಪ್ತಿ ಪಂಚನಾಮೆಯಾಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿ ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಯಾಂಪಲ್ ನೋಡಿ ಗುರುತಿಸಿರುವುದರಿಂದ ಅದನ್ನು ಮು. ಮಾ. 1 ರಿಂದ 3 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಎ. ಎಮ್. ಜಿ. ವಕೀಲರಿಂದ.</u>

1. ಪಂಚರನ್ನು ನಾನೇ ಕರೆಸಿದ ನಂತರ ಬಂದಿರುತ್ತಾರೆ. ನಾನು ಪಂಚರಿಗೆ ನೋಟಿಸು ನೀಡಿರುವುದಿಲ್ಲ. ಮಲಾರ ಗ್ರಾಮದಲ್ಲಿ ಹೊಟೆಲ ದರ್ಗಾ ಹತ್ತಿರ ಇರುತ್ತದೆ. ಮರೆಯಾಗಿ ಅರ್ಧ ಕಿ.ಮೀ. ದೂರದಿಂದ ನೋಡಿರುತ್ತೇವೆ. 2-3 ಜನರು ಗ್ರಾಹಕರು ಇದ್ದರು. ಆರೋಪಿತನಿಗೆ ಹಿಡಿಯಲು ಪ್ರಯತ್ನ ಮಾಡಿದ್ದರೂ ಕೂಡ ಓಡಿ ಹೋಗಿರುತ್ತಾನೆ. ಹೊಟೆಲ ಹತ್ತಿರ ದರ್ಗಾ ಅಷ್ಟೇ ಇರುತ್ತದೆ. ಸದರಿ ನಾವು ದಾಳಿ ಮಾಡಿದ ಹೊಟೆಲನಲ್ಲಿ 2-3 ಜನರು ಇದ್ದರು. ಹೊಟೆಲಗೆ ಹೆಸರು ಇರಲಿಲ್ಲ. ಸದರಿ ಹೊಟೆಲ ಚಪ್ಪರದ್ದು ಇರುತ್ತದೆ. ಸದರಿ ಹೊಟೆಲ ಯಾರ ಹೆಸರಿಗೆ ಇರುತ್ತದೆ ಎಂದು ಗೊತ್ತಿಲ್ಲ. ಹೊಟೆಲ ಯಾರಿಗೆ ಸೇರಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಗುನ್ನೆ ಸ್ಥಳದಲ್ಲಿ ಟೈಪ ಮಾಡಿರುತ್ತೇವೆ. ಪಂಚನಾಮೆಯ ಪ್ರಿಂಟನ್ನು ಠಾಣೆಯಲ್ಲಿ ತೆಗೆದಿರುತ್ತೇವೆ. ಪಂಚರ ಸಹಿಯನ್ನು ಗುನ್ಹಾ ಸ್ಥಳದಲ್ಲಿ ಮಾಡಿರುತ್ತಾರೆ. ಸದರಿ ಪ್ರಿಂಟ್ ಎಲ್ಲಿ ತೆಗೆದಿರುತ್ತಾರೆ ಎಂದು ನನಗೆ ನೆನಪಿಲ್ಲ. ಸದರಿ ಆರೋಪಿತರಿಗೂ ಮತ್ತು ಮು. ಮಾ. ಗಳಿಗೂ ಮತ್ತು ಗುನ್ನೆ ಸ್ಥಳಕ್ಕೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ